# ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲ-571440

ದಿನಾಂಕ : 22-02-2018

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ "ಅಣಕು ನ್ಯಾಯಾಲಯ"

## ವಿದ್ಯಾರ್ಥಿ ಜೀವನಕ್ಕೆ ರೂಪ ಕೊಡುವುದು ವಿದ್ಯಾ ಸಂಸ್ಥೆಗಳು – ಗೌರವಾನ್ವಿತ ಶ್ರೀ ಡಿ. ವಿನಯ್

**ಕೊಳ್ಳೇಗಾಲ 22-02-2018 :** ಬದುಕಿನಲ್ಲಿ ವಿದ್ಯಾರ್ಥಿ ಜೀವನ ಪ್ರಮುಖ ಘಟ್ಟ ಜೀವನದ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುವ ಸಮಯ. ಶಿಕ್ಷಣ, ಸಂಸ್ಕಾರ, ಪ್ರತಿಭೆ ಇತ್ಯಾಧಿಗಳು ಜೀವನಕ್ಕೆ ಬೇಕಾದ ಪ್ರಮುಖ ಅಂಶಗಳು. ಇವೆಲ್ಲವುಗಳನ್ನು ಒಳಗೊಂಡಂತೆ ಜೀವನಕ್ಕೆ ಒಳ್ಳೆಯ ರೂಪ ಕೊಡುವ ಕೆಲಸ ನಡೆಯುವುದೇ ಇಂತಹ ವಿದ್ಯಾ ಸಂಸ್ಥೆಗಳಲ್ಲಿ ಎಂದು ಗೌರವಾನ್ವಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಡಿ ವಿನಯ್ ರವರು ಹೇಳಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ಯು.ಜಿ.ಸಿ ಪ್ರಾಯೋಜಿತ "ಅಣಕು ನ್ಯಾಯಾಲಯ" "Moot court" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಎಂದರೆ ಪದವಿ ಮಾತ್ರವಲ್ಲ, ವಿದ್ಯೆಯೊಡನೆ ಬುದ್ಧಿಯೂ ಇರಬೇಕು. ಜೊತೆಗೆ ಪ್ರತಿಭೆಯೂ ಬೇಕು. ಇವೆಲ್ಲವನ್ನು ಸೇರಿಸಿಕೊಂಡು ಬೆಳೆಯುವ ದೊಡ್ಡ ಗುಣ ವಿದ್ಯಾರ್ಥಿಗಳಾದ ತಮ್ಮಲ್ಲಿರಬೇಕು ಎಂದು ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀ ಎಸ್ ಜೆ ಕೃಷ್ಣರವರು ನಿಮ್ಮ ವಿಶ್ವವಿದ್ಯಾನಿಲಯವು ನಿಗದಿ ಪಡಿಸುವ ವಿಷಯ ಗಳನ್ನು ಅಧ್ಯಯನ ಮಾಡುವ ಜೊತೆಗೆ ಅಣಕು ನ್ಯಾಯಾಲಯ, ಅಣಕು ಸಂಸತ್, ವಿವಿಧ ಸ್ಪರ್ಧೆಗಳು ಹೀಗೆ ಹಲವಾರು ನವನವೀನ ಕೌಶಲ್ಯಾಧಾರಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದ ನಿಮ್ಮ ವಿದ್ಯಾರ್ಥಿ ಜೀವನವಷ್ಟೇ ಅಲ್ಲದೆ ಜೀವನವಿಡೀ ಸುಖಮಯವಾಗಿರುತ್ತದೆ ಎಂದು ತಿಳಿಸುತ್ತಾ ಸಾಮಾನ್ಯ ಪದವಿ ಕಾಲೇಜಿನಲ್ಲಿ ಅಣಕು ನ್ಯಾಯಾಲಯದಂತಹ ಕಾರ್ಯಕ್ರಮವನ್ನು ಆಯೋಜಿಸಿರುವುದು ನಿಜಕ್ಕೂ ಪ್ರಶಂಸನಾರ್ಹ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ ಉಮೇಶ ವಿದ್ಯಾವಂತರ ಎರಡು ಪ್ರಮುಖ ಅಸ್ತ್ರಗಳು ಎಂದರೆ ಕರುಣೆ ಮತ್ತು ಕ್ಷಮೆ, ಕ್ಷಮಯಾ ಧರಿತ್ರಿ ಎಂಬುದು ವಿದ್ಯಾವಂತರ ಜ್ಞಾನಿಗಳ ಬಾಯಿಯಿಂದ ಬಂದಂತಹ ದಿವ್ಯ ವಾಣಿ. ಇಂತಹ ವಿದ್ಯೆ ಸಿಗುವುದೇ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಇಲ್ಲಿ ಬತ್ತ ತುಂಬುವ ಮೂಟೆಗಳಾಗದೆ ಬೆಳೆಯುವ ಪೈರುಗಳಾಗಬೇಕು. ಅಂತಹ ವಾತಾವರಣ ನಮ್ಮ ಕಾಲೇಜಿನಲ್ಲಿ ಸೃಷ್ಠಿಯಾಗಬೇಕೆಂಬ ಆಶಯದಿಂದಲೇ ಇಂತಹ ಕಾರ್ಯಕ್ರಮಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಯೋಜಿಸಲಾಗುತ್ತಿದೆಯಲ್ಲದೆ ಈ ದಿಸೆಯಲ್ಲಿ ಪಟ್ಟಣದ ಎಲ್ಲ ಸಂಘ ಸಂಸ್ಥೆಗಳಂದ ಪ್ರೋತ್ಸಾಹ ಸಿಗುತ್ತಿರುವುದು ಸಂತೋಷ ತಂದಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಶ್ರೀಮತಿ ಗೌರಮ್ಮಣ್ಣಿ ಶ್ರೀ ಎನ್ ರಾಧಕೃಷ್ಣ, ಶ್ರೀ ಎಂ ನಾಗೇಶ, ಶ್ರೀ ಎಸ್ ನಾಗರಾಜು, ವಕೀಲರ ಸಂಘದ ಕಾರ್ಯದರ್ಶಿಯಾದ ಶ್ರೀ ಎನ್ ಬಸವರಾಜು, ಹಾಗೂ ಶ್ರೀ ಎನ್ ರಾಧಕೃಷ್ಣ, ಶ್ರೀ ಎಂ ನಾಗೇಶ್ ರವರು ಉಪಸ್ಥಿತರಿದ್ದರು.

ಶ್ರೀಮತಿ ಎಸ್ ಸುಮರವರು ಸ್ವಾಗತಿಸಿ, ಕು. ಆರ್ ಪಿ. ಸೌಮ್ಯರವರು ವಂದಿಸಿದರು. ಶ್ರೀ ಕೆ ಆರ್ ಗುರುಪ್ರಸಾದ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ವೇದಿಕೆ ಸಮಾರಂಭದ ನಂತರ ವಿದ್ಯಾರ್ಥಿನಿಯರು ಅಣಕು ನ್ಯಾಯಾಲಯ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಶ್ರೀಮತಿ ಗೌರಮ್ಮಣ್ಣಿ, ಮಹಿಳಾ ಸದಸ್ಯರು, ಜಿಲ್ಲಾ ಗ್ರಾಹಕ ವೇದಿಕೆ ಚಾಮರಾಜನಗರ ರವರು ಗೌರವಾನ್ವಿತ ನ್ಯಾಯಾಧೀಶರಾಗಿ ಕಾರ್ಯ ಕಲಾಪ ನಡೆಸಿಕೊಟ್ಟರು.

ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಯು.ಜಿ.ಸಿ ಪ್ರಾಯೋಜಿತ "ಅಣಕು ನ್ಯಾಯಾಲಯ" "Moot court" ಕಾರ್ಯಕ್ರಮವನ್ನು ಗೌರವಾನ್ವಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಡಿ ವಿನಯ್ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಗೌರಮ್ಮಣ್ಣಿ, ಶ್ರೀ ರಾಧಾಕೃಷ್ಣ, ಶ್ರೀ ನಾಗೇಶ, ಶ್ರೀ ಎಸ್ ಜೆ ಕೃಷ್ಣ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಎಸ್ ನಾಗರಾಜು, ಹಾಗೂ ಶ್ರೀ ಎಸ್ ಬಸವರಾಜುರವರನ್ನು ಕಾಣಬಹುದು.



ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಯು.ಜಿ.ಸಿ ಪ್ರಾಯೋಜಿತ "ಅಣಕು ನ್ಯಾಯಾಲಯ" "Moot court" ಕಾರ್ಯಕ್ರಮವನ್ನು ಗೌರವಾನ್ವಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಡಿ ವಿನಯ್ ರವರು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಗೌರಮ್ಮಣ್ಣಿ ಶ್ರೀ ರಾಧಾಕೃಷ್ಣ, ಶ್ರೀ ನಾಗೇಶ, ಶ್ರೀ ಎಸ್ ಜೆ ಕೃಷ್ಣ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಎಸ್ ನಾಗರಾಜು, ಹಾಗೂ ಶ್ರೀ ಎಸ್ ಬಸವರಾಜುರವರನ್ನು ಕಾಣಬಹುದು.



ವಿದ್ಯಾರ್ಥಿನಿಯರಿಂದ ಅಣಕು ನ್ಯಾಯಾಲಯದ ಪ್ರದರ್ಶನ.



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ವಕೀಲರು ಹಾಗೂ ವಿದ್ಯಾರ್ಥಿನಿಯರು



ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಅಧ್ಯಾಪಕರು ಮತ್ತು ವಿದ್ಯಾರ್ಥಿನಿಯರು

